**ಓ.ಎಸ್ ನಂ. 17/2023 ಪಿ.ಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕ 1.8.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 9 ನೇ ಪ್ರತಿ ವಾದಿ ಪರ ಶ್ರೀ ಎಚ್.ಎಮ್.ಎಮ್.ಜಿ. ವಕೀಲರಿಂದಃ**

ನಾನು ಆಲನಹಳ್ಳಿ ಗೇಟ್ನಲ್ಲಿ ವಾಸಾವಾಗಿರುತ್ತೇನೆ. ನನ್ನ ಸಹೋದರರಾದ ಸ್ವಾಮಿ ಮತ್ತು ಕುಮಾರ್ ರವರು ಸಹ ಆಲನಹಳ್ಳಿಯಲ್ಲಿಯೇ ವಾಸವಾಗಿರುತ್ತಾರೆ. ನಾನು 1 ನೇ ವಾದಿಯ ಪರವಾಗಿಯೂ ಸಹ ಸಾಕ್ಷಿ ನುಡಿಯುತ್ತಿದ್ದೇನೆ . ನಾನು ಮತ್ತು 1 ನೇ ವಾದಿ ನನ್ನ ಸಹೋದರರ ಮನೆಗೆ ಹೋಗಿ ಬರುತ್ತೇವೆ ಎಂದರೆ ಸರಿಯಲ್ಲ. ನನ್ನ ಮದುವೆಯಾಗಿ 50 ವರ್ಷ ಆಗಿರುತ್ತದೆ. 1 ನೇ ವಾದಿಯ ಮದುವೆಯಾಗಿ 60 ವರ್ಷ ಆಗಿರುತ್ತದೆ. ನನ್ನ ಹಾಗೂ 1 ನೇ ವಾದಿಯ ಮದುವೆಯನ್ನು ನನ್ನ ತಂದೆಯೇ ಮಾಡಿರುತ್ತಾರೆ. ದಾವಾ ಆಸ್ತಿಯು ನನ್ನ ತಂದೆಗೆ ಸಾಗುವಳಿ ಮೂಲಕ ಬಂದಿರುತ್ತದೆ. ದಾವಾ ಆಸ್ತಿಯು ನನ್ನ ತಾತನಿಂದ ಬಂದಿರುವ ಆಸ್ತಿ ಆಗಿರುವುದಿಲ್ಲ ಎಂದರೆ ಸಾಕ್ಷಿದಾರರು ನನ್ನ ತಾತ ಬದುಕಿದ್ದಾಗ ನನ್ನ ತಂದೆಯ ಹೆಸರಿನಲ್ಲಿ ಸಾಗುವಳಿ ಮಂಜೂರು ಆಗಿರುತ್ತದೆ ಎನ್ನುವರು. ನನ್ನ ದಾವಾ ಪತ್ರದಲ್ಲಿ ದಾವಾ ಆಸ್ತಿಯು ಸಾಗುವಳಿ ಮೂಾಲಕ ಮಂಜೂರು ಆಗಿರುತ್ತದೆ ಎಂದು ಬರೆಸಿರುತ್ತೇನೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ಈ ದಾವೆ ದಾಖಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ದಾವಾ ಪತ್ರದಲ್ಲಿ ದಾವಾ ಆಸ್ತಿಯು ಹೇಗೆ ಬಂದಿರುತ್ತದೆಂದು ಬರೆಸಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ತೀರಿಕೊಂಡು ಎಷ್ಟು ವರ್ಷಗಳಾಗಿರುತ್ತದೆಂದು ನನಗೆ ಗೊತ್ತಿಲ್ಲ. ನನ್ನ ತಾಯಿ ತೀರಿಕೊಂಡು 20 ವರ್ಷಗಳಾಗಿರುತ್ತದೆ. 2 ರಿಂದ 5 ನೇ ಪ್ರತಿವಾದಿಯರು 1 ನೇ ಪ್ರತಿವಾದಿಯ ಹೆಂಡತಿ ಮಕ್ಕಳು ಎಂದರೆ ಸರಿ. 2 ರಿಂದ 5 ನೇ ಪ್ರತಿವಾದಿಯರ ಹೆಸರಿನಲ್ಲಿ ದಾವಾ ಆಸ್ತಿಯ ಖಾತೆ ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಯಾವ ಉದ್ದೇಶಕ್ಕೆ 2 ರಿಂದ 5 ನೇ ಪ್ರತಿವಾದಿಯರನ್ನು ಸೇರಿಸಿರುತ್ತೀರಾ ಎಂದರೆ ಸಾಕ್ಷಿದಾರರು ಅವರು 1 ನೇ ಪ್ರತಿವಾದಿಯ ಮಕ್ಕಳಾಗಿರುವುದರಿಂದ ಸೇರಿಸುತ್ತೇನೆ ಎನ್ನುವರು. ನನಗೆ ರೇಣುಕಾ ಎನ್ನುವವರ ಪರಿಚಯ ಇರುವುದಿಲ್ಲ, ಅವರು ಎಲ್ಲಿ ವಾಸವಾಗಿರುತ್ತಾರೆ ಎಂದು ಗೊತ್ತಿರುವುದಿಲ್ಲ. 9 ನೇ ಪ್ರತಿವಾದಿಯ ವಿಳಾಸವನ್ನು ನಮ್ಮ ಊರಿನಲ್ಲಿ ಪಡೆದುಕೊಂಡಿದ್ದು ಯಾರಿಂದ ಪಡೆದುಕೊಂಡಿರುತ್ತೇನೇಂದು ನೆನಪಿರುವುದಿಲ್ಲ. ಅವರ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ. ಅವರು ನನ್ನ ಸಂಬಂಧಿಕರು ಆಗಿರುವುದಿಲ್ಲ. 1 ನೇ ಪ್ರತಿವಾದಿಯು ಸ್ವಂತ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿದಾರರು ಜಾಗ ಖರೀದೀಸಿ ಮನೆ ಕಟ್ಟಿರುತ್ತಾರೆ ಎನ್ನುವರು. ಯಾವ ವರ್ಷಐಲ್ಲಿ ಜಾಗ ಖರೀದೀಸಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಸದರಿ ಮನೆಯ ಪಕ್ಕದಲ್ಲಿ ಖಾಲಿ ನಿವೇಶನ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಸರ್ಕಾರದಿಂದ ಮಂಜೂರು ಆಗಿರುವ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಮ್ಮ ಕುಮಾರ್ ಗೆ ಹನಗೋಡು ಹೋಬಳಿ, ಬೀರನಹಳ್ಳಿ ಗ್ರಾಮದಲ್ಲಿ ಸರ್ವೆ ನಂ. 103 ರಲ್ಲಿ 2 ಎಕರೆ 3 ಗುಂಟೆ ಜಮೀನು ಇದ್ದು, ಅದನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ಜಮೀನು ಇರುವ ಬಗ್ಗೆ ಗೊತ್ತಿಲ್ಲ ಎನ್ನುವರು. ಸದರಿ ಜಮೀನು ಈಗ 6 ಮತ್ತು 7 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಗೊತ್ತಿಲ್ಲ. ನಾನು ಉದ್ದೇಶ ಪೂರ್ವಕವಾಗಿ ಸದರಿ ಮನೆ ಮತ್ತು ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿಯರು ದಾವಾ ಆಸ್ತಿಯ ಪೈಕಿ 2 ಎಕರೆ ಜಮೀನನ್ನು ದಿನಾಂಕಃ 11.07.2016 ರಲ್ಲಿ 9 ನೇ ಪ್ರತಿವಾದಿ ಕ್ರಯ ಪತ್ರ ಮಾಡಿಕೊಟ್ಟಿರುವ ವಿಚಾರ ನನಗೆ ಗೊತ್ತಿರುವುದಿಲ್ಲ.

ನಂತರ 9 ನೇ ಪ್ರತಿವಾದಿಯು 1 ರಿಂದ 5 ನೇ ಪ್ರತಿವಾದಿಯರ ವಿರುದ್ಧ ನಿರ್ದಿಷ್ಟ ಪರಿಹಾರ ಕೋರಿ ದಾವೆ ಸಲ್ಲಿಸಿ ಡಿಕ್ರಿ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು 1 ವರ್ಷದ ಹಿಂದೆ ಗೊತ್ತಾದ ನಂತರ ಈ ದಾವೆ ಹಾಕಿರುತ್ತೇನೆ ಎನ್ನುವರು. ಹೇಗೆ ಡಿಕ್ರಿ ಆಗಿರುವ ವಿಚಾರ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿದಾರರು ತಾಲ್ಲೂಕು ಕಚೇರಿಯಲ್ಲಿ ದಾಖಲೆ ತೆಗೆದುಕೊಂಡಾಗ ಗೊತ್ತಾಗಿರುತ್ತದೆ ಎನ್ನುವರು. ತಾಲ್ಲೂಕು ಕಚೇರಿಯಲ್ಲಿ ನಾನೇ ದಾಖಲೆಯನ್ನು ತೆಗೆದುಕೊಂಡಿರುತ್ತೇನೆ ಆದರೆ ದಿನಾಂಕ ನೆನಪಿರುವುದಿಲ್ಲ. ಸದರಿ ಅಸಲು ದಾವೆಗೆ ಸಂಬಂಧಿಸಿದಂತೆ ನಾನು ಈ ನ್ಯಾಯಾಲಯದಿಂದ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. 2006 ರಲ್ಲಿಯೇ ಎಮ್. ಆರ್ ನಂ. 16/2006-07 ರ ವಿಭಾಗದಂತೆ 1 ನೇ ಪ್ರತಿವಾದಿ ಮತ್ತು ಕುಮಾರ್ ಅವರ ಹೆಸರಿನಲ್ಲಿ ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿ ಮತ್ತು ಕುಮಾರ್ ರವರ ಹೆಸರಿಗೆ ಖಾತೆ ಆಗಿರುವುದನ್ನು ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ. 5 ನೇ ಪ್ರತಿವಾದಿ 1 ರಿಂದ 4 ಮತ್ತು 9 ನೇ ಪ್ರತಿವಾದಿಯ ವಿರುದ್ಧ ಹೆಚ್.ಡಿ.ಕೋಟೆಯ ಅಧಿಕ ಸಿವಿಲ್ ನ್ಯಾಯಾಲಯದಲ್ಲಿ ಓ. ಎಸ್ ನಂ. 396/2022 ರಂತೆ ವಿಭಾಗ ಕೋರಿ ದಾವೆ ಹಾಕಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. 9 ನೇ ಪ್ರತಿವಾದಿಯು ಓ. ಎಸ್. ನಂ. 66/2018 ರಂತೆ 2 ಎಕರೆ ಆಸ್ತಿಗೆ ಡಿಕ್ರಿ ಬರೆದುಕೊಂಡಿದ್ದು, ಅದರಲ್ಲಿ 2 ಎಕರೆ ಆಸ್ತಿ ಅವರಿಗೆ ಹೋಗುತ್ತದೆ ಎಂಬ ಉದ್ದೇಶದಿಂದ ನಾನು ಮತ್ತು 1 ರಿಂದ 5 ನೇ ಪ್ರತಿವಾದಿಗಳು ಶಾಮೀಲಾಗಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಓ. ಎಸ್. ನಂ. 66/2018 ರ ತೀರ್ಪಿನ ವಿರುದ್ಧ 1 ನೇ ಪ್ರತಿವಾದಿ ಮೈಸೂರಿನ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯಲ್ಲಿ ನನ್ನನ್ನು ಪಕ್ಷಗಾರರನ್ನಾಗಿ ಮಾಡಬೇಕೆಂದು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಮೇಲ್ಮನವಿ ಸಲ್ಲಿಸಿರುವ ವಿಚಾರ ಹೇಗೆ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿದಾರರು ನನ್ನ ಅಕ್ಕನ ಮಗ ಹೇಳಿರುತ್ತಾನೆ ಎನ್ನುವರು. ನನ್ನ ಅಕ್ಕನ ಮಗ ನನಗೆ ಹೇಳಿರುವುದಿಲ್ಲ, 5 ನೇ ಪ್ರತಿವಾದಿಯು ಹೇಳಿ ನನಗೆ ಅರ್ಜಿ ಹಾಕಿಸಿರುತ್ತಾನೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಸಮಯ ಮೀರಿದ್ದರಿಂದ ಮುಂದುವರಿದ ಪಾಟೀಸವಾಲಿಗೆ ಸಮಯಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.